# ಕವಿತೆಯ ಹಾಡುಪಾಡು



ಕಾವ್ಯಾನುಸಂಧಾನಕ್ಕೆ ಕಾವ್ಯವಾಚನವೂ ಕಾವ್ಯಗಾಯನವೂ ಪ್ರಿಯವಾದ ಮಾರ್ಗಗಳು. ಕನ್ನಡದಲ್ಲಿ ಅದಕ್ಕೆ ಹೆಮ್ಮೆ ಪಡುವ ಪರಂಪರೆಯಿದೆ. ಕಾವ್ಯವಾಚನ ಅಥವಾ ಗಮಕ ಕಲೆಯಿಂದಾಗಿ, ಅಕ್ಷರದಿಂದ ದೂರವಾಗಿದ್ದ ಸಮುದಾಯಗಳೂ ಕಾವ್ಯಾಸ್ವಾದದಿಂದ ದೂರವಾಗಲಿಲ್ಲ. 'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು' ಎಷ್ಟು ನಿಜವೋ ಕುಮಾರವ್ಯಾಸನನ್ನು ವಾಚಿಸಿದರೆ, ಹಾಡಿದರೆ ಅದೇ ಆಗುವುದೂ ಅಷ್ಟೇ ನಿಜ. ಶಿಷ್ಟ ಸಾಹಿತ್ಯ ಜನಮಾನಸದಲ್ಲಿ ಪುಷ್ಟಗೊಂಡದ್ದು ಸಂಗೀತದ ಸಾಹಚರ್ಯದಿಂದ ಎಂಬುದನ್ನು ಮರೆಯಲಾಗದು.

ಹೊಸಗನ್ನಡ ಕಾವ್ಯ ಒಂದು ರೀತಿಯಲ್ಲಿ ಸಂಗೀತವನ್ನು ಒಡಲೊಳಗೆ ಇಟ್ಟುಕೊಂಡೇ ಹುಟ್ಟಿತು. ಭಾವಗೀತೆಗಳೆಂದೇ ಕರೆಸಿಕೊಂಡ ಕವಿತೆಗಳು ಆಕಾಶವಾಣಿಯಿಂದಾಗಿ ಮನೆಮನೆಗೆ ಮುಟ್ಟಿದವು. ನಂತರ ಹಲವು ವಿರೋಧಗಳ ನಡುವೆಯೂ ನವ್ಯ ಕವಿತೆಗಳು ರಾಗಕ್ಕೆ ಒಲಿದವು. ನವ್ಯದ ಕೆಲವು ಗಪದ್ಯಗಳು ಕೂಡ ಭಾವದಲ್ಲಿ ಮಿಂದದ್ದು ಸುಳ್ಳಲ್ಲ. ಕನ್ನಡದಲ್ಲಿ ಕೆಲವು ಭಾವಗೀತೆಗಳು ಚಿತ್ರಗೀತೆಗಳನ್ನೂ ಮೀರಿಸುವ ಜನಪ್ರಿಯತೆ ಪಡೆದಿವೆ. ಮುಂದಿನ ದಿನಗಳಲ್ಲಿ ಕಾವ್ಯ ಖಡ್ಗವಾಗುವ ಆಶಯದಲ್ಲಿ ಕೂಡ, ಕವಿತೆಗಳು ಹೋರಾಟದ ಹಾಡುಗಳೆನಿಸಿದವು.

ಖಂಡಿತವಾಗಿ ಕವಿತೆಗಳನ್ನು ಓದುವ, ಓದಿಕೊಳ್ಳುವ ಸುಖವೇ ಬೇರೆ: ಆದರೆ ಕೆಲವನ್ನಾದರೂ ಹಾಡಾಗಿ ಕೇಳುವ ಅನುಭವ ಬೇರೆ. ಎಲ್ಲವೂ ಹಾಡಾಗಲಾರದು ಅನ್ನುವುದು ನಿಜ; ಆದರೂ ಕೆಲವೊಮ್ಮೆ ಹಾಡು ಮೀಟುವ ಹಾಗೆ ಓದು ತಟ್ಟುವುದಿಲ್ಲ. ಕನ್ನಡದಲ್ಲಿ ಹೊಸದಾಗಿ ಬರೆಯುತ್ತಿರುವ ಹುಡುಗ ಹುಡುಗಿಯರು ತಮ್ಮ ಕವಿತೆಗಳನ್ನು ಹಾಡು ಮಾಡಲೇಕೋ ಹಂಬಲಿಸುತ್ತಿಲ್ಲ. ಮಾಧುರ್ಯ ಬೆರೆತರೆ ಕವಿತೆಯ ಗಾಂಭೀರ್ಯವೇನೂ ಕಡಿಮೆಯಾಗುವುದಿಲ್ಲ !

**-ಆರ್. ಪೂರ್ಣಿಮಾ**